**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂಃ29/2018 ಪಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **03.11.2022** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟಿ ಸವಾಲುಃ 2** ರಿಂದ **4** ನೇ ಪ್ರತಿವಾದಿಗಳ ಪರ ಶ್ರೀ ಪಿ.ಎಸ್ ವಕೀಲರಿಂದಃ

ದಾವಾ ಆಸ್ತಿಯು ಮೂಲತಃ ರಂಗನಾಥ ಸ್ವಾಮಿ ದೇವಸ್ಥಾನ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿ ಸರ್ಕಾರದಿಂದ ಮಂಜೂರಾದ ಆಸ್ತಿ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ, ಸಾಕ್ಷಿ ಮುಂದುವರಿದು ಸದರಿ ಆಸ್ತಿಯು ನನ್ನ ತಂದೆಯಿಂದ ನನಗೆ ದಾನಪತ್ರದ ಮುಖಾಂತರ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನಾನು ನನ್ನ ವಾದಪತ್ರದಲ್ಲಿ ತಿಳಿಸಿರುತ್ತೇನೆ.

ವಡ್ಡಲಯ್ಯ ಅಲಿಯಾಸ ದಾಸಪ್ಪ ನನ್ನ ತಂದೆಯಾಗಿರುತ್ತಾರೆ. ಶ್ರೀನಿವಾಸಯ್ಯರವರು ನನ್ನ ಚಿಕ್ಕಪ್ಪ ಆಗಿರುತ್ತಾರೆ. ಸೀತಮ್ಮರವರು ನನ್ನ ತಂದೆಯ ದೊಡ್ಡಪ್ಪನ ಹೆಂಡತಿಯಾಗಿರುತ್ತಾರೆ. ತಿಮ್ಮಯ್ಯ ಅಲಿಯಾಸ ತಾತಪ್ಪ ಮತ್ತು ವೆಂಕಟಾಚಲಯ್ಯ ನನಗೆ ಗೊತ್ತಿರುವುದಿಲ್ಲ. ತಿಮ್ಮಪ್ಪಯ್ಯನ ಮಗ ರಂಗಪ್ಪ ನನಗೆ ಗೊತ್ತಿರುವುದಿಲ್ಲ.

ನಿಪಿ-**1** ರಲ್ಲಿರುವ ಸಾಗುವಳಿದಾರರು ನನ್ನ ಸಂಬಂಧಿಕರಾಗಿರುವುದಿಲ್ಲ. ನಿಪಿ-**1** ರ **4** ನೇ ಪುಟದಲ್ಲಿ ನಮೂದಾಗಿರುವ **17** ಗುಂಟೆ ಜಮೀನು ನನಗೆ ದಾನಪತ್ರದ ಮುಖಾಂತರ ಬಂದಿರುವ ಜಮೀನು ಆಗಿರುತ್ತದೆ. ಸದರಿ ಆಸ್ತಿಯು ನನ್ನ ತಂದೆಗೆ ಸೀತಮ್ಮರವರಿಂದ ಬಂದಿದ್ದು, ನನ್ನ ತಂದೆಗೆ ಯಾವ ದಾಖಲೆಯ ಆಧಾರದ ಮೇಲೆ ಬಂದಿರುತ್ತದೆ ಎನ್ನುವುದು ನನಗೆ ಗೊತ್ತಿರುವುದಿಲ್ಲ. ನನ್ನ ತಂದೆ ನನ್ನ ಹೆಸರಿಗೆ ದಾನಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ ನನ್ನ ಜೀವಿತಾವಧಿಯಲ್ಲಿ ಯಾವ ಯಾವ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಎನ್ನುವುದನ್ನು ನಾನು ತಿಳಿದುಕೊಂಡಿರುವುದಿಲ್ಲ. ನನ್ನ ತಂದೆಗೆ ಸರ್ವೇ ನಂ.**53** ರಲ್ಲಿ **34** ಗುಂಟೆ ಮಂಜೂರಾಗಿದ್ದು, ಸದರಿ ಆಸ್ತಿಯನ್ನು ಬೇರೆ ಬೇರೆಯವರಿಗೆ

ಭಾಗ ಭಾಗವಾಗಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ತಂದೆಯವರು ಸದರಿ ಸರ್ವೇ ನಂಬರನಲ್ಲಿ ಜಮೀನನ್ನು ಮಾರಾಟ ಮಾಡಿರುವ ಕಾರಣ ಖರೀದಿದಾರರ ಹೆಸರುಗಳು ನಿಪಿ-1 ರಲ್ಲಿ ನಮೂದು ಆಗಿರುತ್ತವೆ ಎಂದರೆ ಸರಿಯಲ್ಲ. ನನ್ನ ತಂದೆ ಸದರಿ ಸರ್ವೇ ನಂಬರನ ಜಮೀನನ್ನು ಸಂಪೂರ್ಣವಾಗಿ ಮಾರಾಟ ಮಾಡಿರುವ ಕಾರಣ ದಾವಾ-1 ನೇ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಬೊಮ್ಮನಹಳ್ಳಿ ಊರಿನ ಪಕ್ಕದಲ್ಲಿ ದಾವಾ-1 ನೇ ಆಸ್ತಿ ಇರುತ್ತದೆ ಎಂದರೆ ಸರಿ. ದಾವಾ-1 ನೇ ಆಸ್ತಿಯು ಗ್ರಾಮ ಠಾಣಾ ವ್ಯಾಪ್ತಿಯಲ್ಲಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸರ್ವೇ ನಂ.53 ನೇ ಜಮೀನನ್ನು ನಾನು ನೋಡಿರುವುದಿಲ್ಲ. ಸರ್ವೇ ನಂ.53 ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ದಾವಾ-1 ನೇ ಆಸ್ತಿಯ ಚೆಕ್ಕುಬಂಧಿ ನನಗೆ ತಿಳಿದಿದೆ. ದಾವಾ-1 ನೇ ಆಸ್ತಿಯ ಪೂರ್ವ ದಿಕ್ಕಿನಲ್ಲಿ ಗವಿಮಠದ ಆಸ್ತಿ ಇರುತ್ತದೆ, ಪಶ್ಚಿಮಕ್ಕೆ- ನಾಲೆ, ಉತ್ತರಕ್ಕೆ- 2 ನೇ ಪ್ರತಿವಾದಿಯ ಜಮೀನು, ದಕ್ಷಿಣಕ್ಕೆ- ನಾಲೆ ಇರುತ್ತದೆ. 2 ನೇ ಪ್ರತಿವಾದಿಯು ನನ್ನ ಚಿಕ್ಕಪ್ಪ ಶ್ರೀನಿವಾಸಯ್ಯರವರಿಂದ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿಯವರು ಅವರ ಖರೀದಿ ಮಾಡಿದ ಜಮೀನಿನ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ. ಸದರಿಯವರ ಜಮೀನು ಹಾಗೂ ನಮ್ಮ ಜಮೀನು ಬೇರೆ ಬೇರೆ ಇರುತ್ತದೆ ಎಂದರೆ ಸರಿ. 2 ನೇ ಪ್ರತಿವಾದಿಯು ದಾವಾ-2 ನೇ ಆಸ್ತಿಗೆ ಸಂಬಂಧಿಸಿದಂತೆ ಖರೀದಿಸಲು 1 ನೇ ಪ್ರತಿವಾದಿಯೊಂದಿಗೆ ಕರಾರು ಪತ್ರ ಮಾಡಿಕೊಂಡಿರುತ್ತಾರೆ. ದಾವಾ-2 ನೇ ಆಸ್ತಿಯ ಖಾತೆ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುವುದಿಲ್ಲ ಎಂದರೆ ಸರಿ. ದಾವಾ-2 ನೇ ಆಸ್ತಿಯ ಖಾತೆಯ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇಲ್ಲದ ಕಾರಣ ಸದರಿ ಕರಾರನ್ನು 2 ನೇ ಪ್ರತಿವಾದಿಯವರು ರದ್ದು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

ದಾವಾ-1 ನೇ ಆಸ್ತಿಗೆ ಸಂಬಂಧಿಸಿದಂತೆ 2 ರಿಂದ 4 ನೇ ಪ್ರತಿವಾದಿಗಳು ಯಾವುದೆ ತಂಟೆ ತಕರಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ-1 ನೇ ಆಸ್ತಿ ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರು ತಮಗೆ ಮಂಜೂರಾದ ಪೂರ್ಣ 34

ಗುಂಟೆ ಜಮೀನನ್ನು ಮಾರಾಟ ಮಾಡಿರುವ ಕಾರಣ ದಾವಾ-1 ನೇ ಆಸ್ತಿಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು, 2 ನೇ ವಾದಿ ಮತ್ತು 1 ನೇ ಪ್ರತಿವಾದಿಯು 2 ರಿಂದ 4 ನೇ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ.

ದಿ.09.07.2010 ರಂದು ಶ್ರೀನಿವಾಸಯ್ಯ ಮತ್ತು ಅವರ ಮಕ್ಕಳಿಂದ 3 ನೇ ಪ್ರತಿವಾದಿಯು ಸರ್ವೇ ನಂ.53 ರಲ್ಲಿ 33 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ-1 ರ 3 ನೇ ಪುಟದಲ್ಲಿರುವ 33 ಗುಂಟೆ ಜಮೀನು ಶ್ರೀನಿವಾಸಯ್ಯ ಬಿನ್ ವಡ್ಗಲಯ್ಯರವರಿಗೆ ಸೇರಿದ ಜಮೀನು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಆಸ್ತಿಯನ್ನೇ 3 ನೇ ಪ್ರತಿವಾದಿ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಶ್ರೀನಿವಾಸಯ್ಯ ಬಿನ್ ವಡ್ಗಲಯ್ಯ ನನ್ನ ಚಿಕ್ಕಪ್ಪ ಎಂದರೆ ಸರಿ.

3 ನೇ ಪ್ರತಿವಾದಿಯು ಸರ್ವೇ ನಂ.53 ರಲ್ಲಿ ಖರೀದಿ ಮಾಡಿದ 33 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಖಾತೆ ಬದಲಾವಣೆಗೆ ಮಾಡಲು ಅರ್ಜಿ ನೀಡಿದ್ದು, ಸದರಿ ಅರ್ಜಿಗೆ ಯಾವುದೇ ತಕರಾರು ನೀಡಿರುವುದಿಲ್ಲ. ನಾನು, 2 ನೇ ವಾದಿ ಮತ್ತು 1 ನೇ ಪ್ರತಿವಾದಿ ಅಸ್ತಿತ್ವದಲ್ಲಿ ಇಲ್ಲದ ದಾವಾ-1 ನೇ ಆಸ್ತಿಗೆ ಸಂಬಂಧಿಸಿದಂತೆ ಖಾತೆ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ-1 ನೇ ಆಸ್ತಿಯಲ್ಲಿ ಕೊಳವೆ ಬಾವಿ ನಿರ್ಮಿಸಿದ ಬಾಬ್ತು ದಾಖಲೆ ಇರುವುದಿಲ್ಲ. ಕೊಳವೆ ಬಾವಿಗೆ ಪಂಪಸೇಟ್ ಹಾಕಿಸಿರುತ್ತೇನೆ. ಸದರಿ ಪಂಪಸೇಟಗೆ ವಿದ್ಯುತ್ ಸಂಪರ್ಕ ಪಡೆದ ಬಾಬ್ತು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಕೊಳವೆ ಬಾವಿಯನ್ನು 2 ನೇ ಪ್ರತಿವಾದಿಯವರು ಕೊರೆಸಿದ್ದು, ಸದರಿ ಪಂಪಸೇಟ್ ಗೆ ಸದರಿಯವರು ವಿದ್ಯುತ ಸಂಪರ್ಕ ಪಡೆದಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಕೊರೆಸಿರುವ ಕೊಳವೆ ಬಾವಿಯನ್ನು ನಾನು ಕೊರೆಸಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ಸ್ವಾಧೀನಕ್ಕೆ ತೊಂದರೆ ಮಾಡಿದ್ದು ಬಾಬ್ತು ದೂರು ನೀಡಿದ್ದು, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಪ್ರತಿವಾದಿಗಳು ಪೊಲೀಸ್ ಠಾಣೆಯಲ್ಲಿ ನೀಡಿದ ಮುಚ್ಚಳಿಕೆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ನಾನು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಜಮೀನಿನ ಬಾಜುದಾರರನ್ನು ಈ ದಾವೆಯಲ್ಲಿ ಸಾಕ್ಷ್ಯ ಮಾಡಿಸಲು ನನಗೆ ಆಗುವುದಿಲ್ಲ. ನಾನು ದಾವಾ ಆಸ್ತಿಯ ಸ್ವಾಧೀನದಲ್ಲಿ ಇಲ್ಲದ ಕಾರಣ ಸದರಿಯವರನ್ನು ಸಾಕ್ಷಿಗೆ ಒಳಪಡಿಸಿದ್ದರೇ ಸತ್ಯಾಂಶ ತಿಳಿಯುತ್ತದೆ ಎಂದು ಅವರನ್ನು ಕರೆಸಲು ಆಗುವುದಿಲ್ಲ ಎಂದು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ:

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**